ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 14/02/2015

# ಕ್ರಿಮಿನಲ್ ಆರೋಪಿ ಶಾಸಕರ ಸಂಖ್ಯೆ ಏರಿಕೆ

**ನವದೆಹಲಿ:** ದೆಹಲಿ ವಿಧಾನಸಭೆಗೆ ಆಯ್ಕೆಯಾಗಿರುವವರಲ್ಲಿ ನಾಲ್ಕನೇ ಮೂರರಷ್ಟು ಶಾಸಕರು ಕೋಟ್ಯಧಿಪತಿಗಳಾಗಿದ್ದಾರೆ. 45 ಆಪ್ ಶಾಸಕರು ಮತ್ತು 7 ಬಿಜೆಪಿ ಶಾಸಕರು ನಾಮಪತ್ರ ಸಲ್ಲಿಕೆ ವೇಳೆ 1 ಕೋಟಿ ರೂ.ಗೂ ಹೆಚ್ಚು ಆಸ್ತಿ ಘೋಷಿಸಿಕೊಂಡಿದ್ದಾರೆ. ಕಳೆದ ಬಾರಿ ಕೋಟ್ಯಧಿಪತಿ ಶಾಸಕರ ಸಂಖ್ಯೆ 44 ಇತ್ತು. ದೆಹಲಿಯ ಪ್ರತಿ ಶಾಸಕರ ಸರಾಸರಿ ಆಸ್ತಿ ಮೌಲ್ಯ 14.29 ಕೋಟಿ ರೂ. ಆಗಿದ್ದು, 2015ಕ್ಕೆ ಹೋಲಿಸಿದರೆ ಇದು ದುಪ್ಪಟ್ಟಾಗಿದೆ. ಇದರ ಜತೆಗೆ ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವ ಶಾಸಕರ ಸಂಖ್ಯೆಯಲ್ಲೂ ಏರಿಕೆಯಾಗಿದೆ. 43 ಶಾಸಕರ ಮೇಲೆ ಮಹಿಳೆಯರ ಮೇಲೆ ದೌರ್ಜನ್ಯ, ಅತ್ಯಾಚಾರ ಯತ್ನ ಸೇರಿ ವಿವಿಧ ಕ್ರಿಮಿನಲ್ ಕೇಸ್‌ಗಳಿವೆ. ಆಯ್ಕೆಯಾಗಿರುವ ಶಾಸಕರಲ್ಲಿ 23 ಜನ 12ನೇ ತರಗತಿಗಿಂತಲೂ ಕಡಿಮೆ ವಿದ್ಯಾಭ್ಯಾಸ ಹೊಂದಿದ್ದಾರೆ. 42 ಜನರು ಪದವಿಧರರಾಗಿದ್ದು, ಇನ್ನೈವರು ಡಿಪ್ಲೊಮ ಪದವಿ ಹೊಂದಿದ್ದಾರೆ.



» ಕೋಟ್ಯಧಿಪತಿಗಳ ಸಂಖ್ಯೆಯಲ್ಲೂ ಏರಿಕೆ

## ಒಂದೇ ದಿನ ಆಪ್‌ಗೆ 11 ಲಕ್ಷ ಜನ ಸೇರ್ಪಡೆ

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ ಭರ್ಜರಿ ಜಯಗಳಿಸಿದ 24 ಗಂಟೆಯಲ್ಲೇ ದೇಶಾದ್ಯಂತ ಸುಮಾರು 11 ಲಕ್ಷ ಜನರು ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ ಎಂದು ಆಪ್ ಮಾಹಿತಿ ನೀಡಿದೆ. ಸದಸ್ಯತ್ವ ನೋಂದಣಿಗಾಗಿ ಮೊಬೈಲ್ ಸಂಖ್ಯೆಯೊಂದನ್ನು ನೀಡಲಾಗಿದ್ದು, ಇದಕ್ಕೆ ಮಿಸ್ಡ್ ಕಾಲ್ ನೀಡುವ ಮೂಲಕ ಪಕ್ಷದ ಸದಸ್ಯರಾಗಿ ಎಂಬ ಅಭಿಯಾನವನ್ನು ಆಪ್ ಪ್ರಾರಂಭಿಸಿತ್ತು. ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷ ಭರ್ಜರಿ ವಿಜಯ ಸಾಧಿಸಿ ಮರಳಿ ಅಧಿಕಾರಕ್ಕೆ ಬಂದ 24 ಗಂಟೆಯಲ್ಲಿ ಈ ನಂಬರ್‌ಗೆ ದೇಶಾದ್ಯಂತ 11 ಲಕ್ಷ ಜನರು ಮಿಸ್ಡ್ ಕಾಲ್ ನೀಡಿ ಪಕ್ಷದ ಸದಸ್ಯತ್ವ ಪಡೆದಿದ್ದಾರೆ.